ನಾನು ಸಿದ್ಧನಿದ್ದೇನೆ. ಅವನೊಬ್ಬ ಅಂಜುಬುರುಕ. ನೀವು ನನ್ನ ತಂದೆಯ ಪಂಗಡದವರು. ನಮಗೆ ಆಶ್ರಯ ನೀಡಿದ್ದೀರಿ. ನಮಗೆ ಹಸಿವಾದಾಗ ಆಹಾರ ಕೊಟ್ಟಿದ್ದೀರಿ. ಸ್ಮರಿಸಿಕೊಳ್ಳಿ. ಆದಿನಗಳಲ್ಲಿ ನನ್ನ ತಂದೆ ನಿಮ್ಮವರಲ್ಲಿ ಒಬ್ಬನಾಗಿದ್ದ. ಅವನೊಬ್ಬ ದೊಡ್ಡ ಯೋಧನಾಗಿದ್ದು ಶತ್ರುಗಳನ್ನು ಇರುವೆಗಳಂತೆ ಹಿಸುಕಿಹಾಕುತ್ತಿದ್ದ. ಅಷ್ಟು ಬಲಶಾಲಿ ಅವನು. ಹಿಂದೆ ನಿಮಗಾಗಿ ಅವನು ಹೋರಾಡಿದಂತೆ, ಅವನ ಮಗ ನಾನು ಇಂದು, ನೀವು ನನಗೆ ಸಹಕಾರ ಕೊಟ್ಟರೆ, ಕಾದಾಡುತ್ತೇನೆ. ನಾನು ಪರ್ಲೀಮಿಲಳನ್ನು ಬಹು ದಿನಗಳಿಂದ ಪ್ರೀತಿಸಿದ್ದೇನೆ. ಅವಳ ತಾರಾ ಕಣ್ಣುಗಳಿಂದಾಗಿ ಅವಳ ಹೃದಯ ಎಂದಿಗೂ ನನ್ನದಾಗಿದೆ. ಯಾವುದೇ ಹೆಣ್ಣಾದರೂ ತನ್ನನ್ನು ಪ್ರೀತಿಸುವ, ಎಳೆಯ, ಬಲಶಾಲಿಯಾದ ಪುರುಷನನ್ನು ಬಿಟ್ಟು, ಅವಳನ್ನು ಕೊಲ್ಲುವ, ನುರಿತ ಗಡ್ಡದ, ಬಾಗಿಹೋಗಿರುವ, ಕುಂಟ ಮುದುಕನ ಬಳಿ ಹೋಗುವುದು ಸಾಧ್ಯವೇ? ನನಗೆ ನೆರವನ್ನು ತಿರಸ್ಕರಿಸುವ ಮುನ್ನ ನನ್ನ ತಂದೆಯನ್ನು ಸ್ಮರಿಸಿಕೊಳ್ಳಿ. ಮುಂದೆ ಬರುವ ಆತನ ಮೊಮ್ಮಕ್ಕಳನ್ನು ಮರೆಯಬೇಡಿ. ನಾವು ಟಿಲ್ಹಾರ್ಟನ ಗುಂಪಿಗೆ ಎಂದೂ ಹೋಗುವುದಿಲ್ಲ. ಬದಲಾಗಿ ನನ್ನ ಹೃದಯ ಸಂಗಾತಿ ಪರ್ಲೀಮಿಲ ಇಲ್ಲಿ ನಿಮ್ಮ ಮುಂದೆ ನಿಂತಿರುವಂತೆಯೇ ಅವಳನ್ನು ಈಟಿಯಿಂದ ಇರಿಯುತ್ತೇನೆ. ನನ್ನ ರಕ್ತ ಅವಳ ರಕ್ತದೊಡನೆ ಬೆರೆತುಹೋಗಲಿ.'

ವಿಂಬಾಕೊಬೊಲೊ ಎದ್ದು ನಿಂತ. ಕೈಯ್ಯಲ್ಲಿ ಆಯುಧಗಳನ್ನು ಹಿಡಿದಿದ್ದ ಅವನು ಭಯಂಕರ ಯೋಧನಂತಿದ್ದ. ಅವನನ್ನು ನೋಡಿದ ಹಿರಿಯರು ಹೇಳಿದರು, 'ನಮ್ಮ ಹಳೆಯ ನಾಯಕನ ಪುತ್ರನನ್ನು ನಮ್ಮ ಶತ್ರುಗಳಿಗೆ ನೀಡಲು ನಾವು ಪೆದ್ದರಾಗಿರಬೇಕು. ಇವನ ತಂದೆ ಹಿಂದೆ ಮಾಡಿದಂತೆ, ಇವನೇ ನಮಗೆ ದಾರಿತೋರಿಸುತ್ತಾನೆ. ಅವನ ಪರ್ಲೀಮಿಲ್ ಮುಂದೆಬರುವ ವೀರರ ತಾಯಿಯಾಗುತ್ತಾಳೆ. ವಿಂಬಾಕೊಬೊಲೊನ ಕುಲದವರೆಲ್ಲಾ ಬಲಶಾಲಿಗಳು. ಅದರ ಹೆಸರೇ ಹೇಳುವಂತೆ ಅವರ ಪುರುಷರು ಬೆಟ್ಟದ ತರಹ.'

ಹಿರಿಯರು ಬೇಹುಗಾರರಿಗೆ ಹೇಳಿದರು, 'ಟಿಲ್ಹಾರ್ಟ ಒಬ್ಬನೇ ಹೊರಬಂದು ಬಯಲಿನಲ್ಲಿ ನಿಲ್ಲಲಿ. ಅಲ್ಲಿ ವಿಂಬಾಕೊಬೊಲೊ ಅವನನ್ನು ಸಂಧಿಸುತ್ತಾನೆ. ಅವರು ಕಾದಾಡಿ ತೀರ್ಮಾನಿಸಲಿ. ಟಿಲ್ಹಾರ್ಟ ಬರದೆ ಹೋದರೆ, ಅವನೊಬ್ಬ ಹೇಡಿ. ಅವನು ಹಿಂದೆಯೇ ಉಳಿಯಲಿ. ವಿಂಬಾಕೊಬೊಲೊ ನಮ್ಮೊಡನೆ ಇರುತ್ತಾನೆ. ನಾವಾಗಿಯೇ ಅವನನ್ನು ಯಾರಿಗೂ ಕೊಡುವುದಿಲ್ಲ.'

ಬೇಹುಗಾರರು ಹಿಂದೆಹೋಗಿ ಸುದ್ದಿಯನ್ನು ಮುಟ್ಟಿಸಿದರು. ಆದರೆ ಯಾವ ಟಿಲ್ಹಾರ್ಟ ಕೂಡ ಸವಾಲನ್ನು ಎದುರಿಸಲು ಬರಲಿಲ್ಲ. ಮಿಕ್ಕವರೊಡನೆ ಅವನು ದೊಡ್ಡ ನದಿಯ ಬಳಿಗೆ ಹಿಂದಿರುಗಿದ.

ವಿಂಬಾಕೊಬೊಲೊ ಮತ್ತು ಪರ್ಲೀಮಿಲ್ ಸುಖವಾಗಿ ಸಂಸಾರ ಮಾಡಿಕೊಂಡಿದ್ದರು. ಅವನೊಬ್ಬ ಚತುರ ಬೇಟೆಗಾರನಾಗಿಯೂ, ಅವಳೋರ್ವ ಮಧುರ ಗಾಯಕಿಯಾಗಿಯೂ ಪ್ರಸಿದ್ಧರಾದರು.

ಕೆಲ ದಿನಗಳ ನಂತರ ಬೌಲ್ಕಾದ ಸುತ್ತಾ ತಣ್ಣನೆಯ ಗಾಳಿ ಬೀಸಲಾರಂಭಿಸಿತು. ಆಗ ಗುಂಪಿನವರು ಮರಗಿಡಗಳಿದ್ದ ದೂರದ ತಾಣವೊಂದಕ್ಕೆ ಹೋಗಿ ಬೀಡುಬಿಟ್ಟರು. ಅಲ್ಲಿ ಅವರಿಗೆ ಚಳಿಗಾಲಕ್ಕೆ ಅವಶ್ಯವಾದ ಆಶ್ರಯ ಮತ್ತು ಸೌದೆಗಳು ಸುಲಭವಾಗಿ ಸಿಗುತ್ತಿದ್ದವು.

ಚಳಿಗಾಲ ಮುಗಿಯುವ ಮುನ್ನ ವಿಂಬಾಕೊಬೊಲೊ ಮತ್ತು ಪರ್ಲೀಮಿಲ್ ಅವರಿಗೆ ಒಬ್ಬ ಮಗ ಹುಟ್ಟಿದ. ಆ ಮಗುವಿನ ಗಾತ್ರವನ್ನು ನೋಡಿ ಗುಂಪಿನವರು, ನಗುತ್ತಾ ಅದನ್ನು 'ಚಿಕ್ಕ ಯಜಮಾನ' ಎಂದು ಕರೆಯುತ್ತಿದ್ದರು. ಅಲ್ಲದೆ ಅವನಿಗಾಗಿ ಆಟದ ಬೂಮೆರಾಂಗುಗಳು, ಎಸೆಯುವ ದೊಣ್ಣೆಗಳನ್ನು ತಂದುಕೊಡುತ್ತಿದ್ದರು. ಇವುಗಳನ್ನು ನೋಡಿದ ತಾಯಿಯ ಕಣ್ಣುಗಳು ಹಿಗ್ಗಿನಿಂದ ಅರಳುತ್ತಿದ್ದವು. ತಂದೆ ಆಗಲೇ ಅವನಿಗೆ ಆಯುಧಗಳನ್ನು ಮಾಡಿಕೊಡುತ್ತಿದ್ದ. ಮಗ ತನಗೆ ಆಶ್ರಯ ನೀಡಿದ ಗುಂಪಿನ ಶತ್ರುಗಳ ಮೇಲೆ ಇವನ್ನು ಪ್ರಯೋಗ ಮಾಡುತ್ತಾನೆ ಎಂಬ ನಂಬಿಕೆ ಅವನಿಗೆ.

ಪರ್ಲೀಮಿಲ್ ಹೊಸ ಹಾಡುಗಳನ್ನು ಹಾಡಿದಳು. ಅವುಗಳನ್ನು ದೈವಗಳು ಅವಳಿಗೆ ಕಲಿಸಿದವು ಎಂದು ಅವಳು ಹೇಳುತ್ತಿದ್ದಳು. ತನ್ನ ಮಗ ಆ ದೂರ ದೇಶದ ಬಯಲು ಪ್ರದೇಶಕ್ಕೇ ಅತಿ ಸುಂದರನಾದವನು, ಅವನು ಅಲ್ಲಿ ಎಂದೆಂದಿಗೂ ವಾಸಿಸುತ್ತಾನೆ ಎಂದು ಅವಳು ನಂಬಿದ್ದಳು.

ಪರ್ಲೀಮಿಲ್ ಹಾಡಿದಾಗ ಮಗ ಕೇಕೆ ಹಾಕಿ ನಗುತ್ತಿದ್ದ. ತಂದೆ ಅಷ್ಟಾಗಿ ಏನೂ ಹೇಳುತ್ತಿರಲಿಲ್ಲ.